## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.**1588/2021**

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಮಂಜಪ್ಪ | ಚಾಸಾಃ **7** ಪ್ರಾಸಾಃ **5** |
| **ತಂದೆಯ ಹೆಸರು** | : | ಉಡುಚಲಪ್ಪ | |
| **ವಯಸ್ಸು** | : | 60 ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಹನುಮಸಾಗರ ಗ್ರಾಮ | |

ದಿನಾಂಕಃ **18-11-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಆರೋಪಿತರು ಗೊತ್ತು. ಚಾಸಾ-1, 4 ರಿಂದ 6 ಗೊತ್ತು. ಚಾಸಾ-8 ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ಅನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ಚಾಸಾ-1 ಮತ್ತು ಆರೋಪಿಯ ಜಮೀನು ಅಕ್ಕ ಪಕ್ಕದಲ್ಲಿರುತ್ತವೆ ಎಂದು ಮತ್ತು ಸಣ್ಣ ಪುಟ್ಟ ವಿಚಾರಗಳಿಗೆ ಅವರ ಮಧ್ಯ ಗಲಾಟೆ ಆಗುತ್ತಿತ್ತು ಎಂದು ದಿಃ 05-02-2021 ರಂದು ಸಂಜೆ 05-00 ಗಂಟೆ ಸಮಯದಲ್ಲಿ ನಾನು, ಚಾಸಾ-4 ಮತ್ತು 6 ರವರು ಚಾಸಾ-1 ರವರ ಮನೆಯ ಹತ್ತಿರ ನಿಂತುಕೊಂಡಿದ್ದಾಗ ಆರೋಪಿತರು ಚಾಸಾ-1 ರವರಿಗೆ ಸೇರಿದ ಸರ್ವೇ ನಂ.25/4 ರ ಜಮೀನಿನ

ಪಕ್ಕದಲ್ಲಿ ಅಡ್ಡಲಾಗಿ ಕಲ್ಲುಗಳನ್ನು ಹಾಕಿದ್ದು ಅದನ್ನು ಕೇಳಲು ಚಾಸಾ-1, 5 ಮತ್ತು 8 ರವರು ಹೋಗಿದ್ದು ಆ ಸಮಯದಲ್ಲಿ ಆರೋಪಿತರು ಏಕಾಏಕೀ ಚಾಸಾ-1, 5 ಮತ್ತು 8 ರವರ ಜೊತೆ ಜಗಳ ಮಾಡಿ ಗಲಾಟೆ ಮಾಡಿರುತ್ತಾರೆ ಎಂದು ಮತ್ತು ನಾನು, ಚಾಸಾ-4 ಮತ್ತು 6 ರವರು ಗಲಾಟೆ ಬಿಡಿಸಿರುತ್ತೇವೆ ಎಂದು, ನಂತರ ಚಾಸಾ-1 ರವರನ್ನು ನಾನು ಕೇಳಲಾಗಿ ಅವರು ಆರೋಪಿತರ ಹತ್ತಿರ ತಮ್ಮ ಜಮೀನಿನ ಬಳಿ ಯಾಕೆ ಕಲ್ಲುಗಳನ್ನು ಹಾಕಿದ್ದೀರಿ ಎಂದು ಕೇಳಲು ಹೋದಾಗ ಆರೋಪಿತರು ಅವರಿಗೆ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದು ಮತ್ತು 2 ನೇ ಆರೋಪಿಯು ಕುಡುಗೋಲಿನಿಂದ ತನ್ನ ತಲೆಯ ಎಡಭಾಗಕ್ಕೆ ಹೊಡೆದು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಮತ್ತು 1 ನೇ ಆರೋಪಿಯು ಚಾಸಾ-5 ಮತ್ತು 8 ರವರಿಗೆ ಕಾಡುಜಾತಿಯ ಮರದ ಕೋಲಿನಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದು ಮತ್ತು ಚಾಸಾ-1 ಮತ್ತು 5 ರವರು ಹೊನ್ನಾಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ಮತ್ತು ಚಾಸಾ-8 ರವರಿಗೆ ಒಳಪೆಟ್ಟಾಗಿದ್ದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು ಮತ್ತು ಈ ಬಗ್ಗೆ ಚಾಸಾ-1 ರವರು ಆರೋಪಿತರ ವಿರುದ್ಧ ದಿಃ 06-02-2021 ರಂದು ದೂರನ್ನು ಕೊಟ್ಟಿದ್ದಾರೆ ಎಂದು ನನಗೆ ತಿಳಿಯಿತು ಎಂದು ಮತ್ತು ಆರೋಪಿತರನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-23 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.